ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ರಾಜ್ಯದಲ್ಲಿ 4ಜಿ ವಿನಾಯಿತಿ ಪಡೆದ ಸಂಸ್ಥೆಗಳ ಕುರಿತು

ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ) –

270 (403) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ 4ಜಿ ವಿನಾಯಿತಿ ಪಡೆದ ಸಂಸ್ಥೆಗಳು ಯಾವುವು; (ಪಟ್ಟಿ ನೀಡುವುದು)

(ಆ) ಕಳೆದ 03 ವರ್ಷಗಳಲ್ಲಿ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಸರ್ಕಾರದ ಯಾವ ಯಾವ ಇಲಾಖೆಗಳಿಗೆ ಎಷ್ಟು ಮೊತ್ತದ ವಸ್ತುಗಳನ್ನು ಸರಬರಾಜು ಮಾಡಲಾಗಿದೆ; (ಇಲಾಖಾವಾರು ವಿವರ ನೀಡುವುದು)

(ಇ) ಕಿಯೋನಿಕ್ಸ್ ಮೂಲಕ ಸರಬರಾಜು ಮಾಡಿರುವ/ಖರೀದಿ ಮಾಡಿರುವ ವಸ್ತುಗಳು ಯಾವುವು; (ವಿವರ ನೀಡುವುದು)

(ಈ) ಕಿಯೊನಿಕ್ಸ್ ಮೂಲಕ ಕಳೆದ 03 ವರ್ಷಗಳಲ್ಲಿ ಖರೀದಿ ಮಾಡಿದ ಹಾಗೂ ಸರಬರಾಜು ಮಾಡಿದ ಕಂಪ್ಯೂಟರ್‌ಗಳೆಷ್ಟು; ಅವುಗಳ ಕಾನ್ಫಿಗರೇಷನ್ ಏನು; (ಪ್ರತಿಯೊಂದು ವಸ್ತುಗಳ ಖರೀದಿ ಹಾಗೂ ಸರಬರಾಜುವಾರು ಪೂರ್ಣ ವಿವರ ನೀಡುವುದು)

(ಉ) ಕಳೆದ 03 ವರ್ಷಗಳಲ್ಲಿ ಕೈಸ್ ಸಂಸ್ಥೆಗೆ ಸರಬರಾಜು ಮಾಡಲಾದ ವಸ್ತುಗಳ ಬೆಲೆ ಎಷ್ಟು? (ಸಂಪೂರ್ಣ ವಿವರ ನೀಡುವುದು)